ತನ್ನ ಆಗಮನ ಪಥ್ಯವಲ್ಲದಿದ್ದರೂ ಸೈರಿಸಿಕೊಂಡು ಮೇಲಕ್ಕೆ ಕರೆದು ವಿಚಾರಿಸುವ ಔದಾರ್ಯ ರಾಯರಿಗೆ. ಔದಾರ್ಯದ ಉರುಳಿಗೆ ಕೊರಳೊಡ್ಡುವಂತೆ ಅವರ ಪತ್ನಿ ಕಾಶಮ್ಮನ ಅನಿರೀಕ್ಷಿತ ಆಗಮನ. ರಾಯರಿಗೆ ತೊಡಕು. ಏನನ್ನೋ ಹೇಳುವ ತುಡಿತಕ್ಕೆ ಅನಪೇಕ್ಷಿತ ತಡೆ!

ಕಿರಣ ಕಾಶಮ್ಮನ ಪ್ರೀತಿಯ ಕರೆಗೆ ಶರಣಾಗತನಾಗಿದ್ದ. ಕಾಶಮ್ಮನ ಪ್ರವೇಶ ರಾಯರಿಗೆ ಅನಿರೀಕ್ಷಿತವಾಗಿದ್ದರೂ ಕಿರಣನ ಜೊತೆಗೆ ಮಾತನಾಡುವ ಅವರ ಕವಲೊಡೆದ ಮಾತುಗಳಿಗೆ ರಾಯರು ಬದ್ಧ ವಿರೋಧಿ! ಸನ್ನಿವೇಶ ಬದಲಾದಾಗ ರಾಯರು ಸೋತವರಂತೆ ತಮ್ಮ ಪಾಡಿಗೆ ತಾವು ಮೆಟ್ಟಲಿಳಿದು ಹೋದರು. ಕಾಶಮ್ಮನ ತಿರಸ್ಕಾರದ ನೋಟಕ್ಕೆ ಬಲಿಯಾದವರಂತೆ ಅವರ ಹೆಜ್ಜೆಗಳು ನಿಧಾನವಾಗಿದ್ದವು.

ರಾಯರು ಸಂಪೂರ್ಣ ಮರೆಯಾದಾಗ ಹೆಂಗಸು ಕಿರಣನತ್ತ ತಿರುಗಿತು.

'ಕಿರಣ, ಬಾ ಒಳಗೆ' ಕುತೂಹಲವನ್ನೇನೋ ಹೇಳುವುದಕ್ಕಾಗಿ ಅವನನ್ನು ಕೋಣೆಯೊಳಗೆ ತಳ್ಳಿ, ಬಾಗಿಲು ಮುಚ್ಚಿ ಚಿಲಕ ಸೇರಿಸಿತು. ಕಿರಣ ಬೆಪ್ಪನಂತಾದ. ಸಮ್ಮೋಹಕ್ಕೊಳಗಾದವನಂತೆ ಹಾಗೇ ನಿಂತಿದ್ದವನ ಕೈ ಹಿಡಿದರು. ಮಾನಸಿಕವಾಗಿ ಅಸ್ವಸ್ಥರಾದವರಂತಿದ್ದ ಶ್ರೀಮಂತ ಹೆಂಗಸಿನ ಬಗ್ಗೆ ಭಯವಿತ್ತು ಕಿರಣನಿಗೆ.

'ಪಾರ್ಟಿ ನಡಿತಾ ಇದೆ. ಯಾರಾದರೂ ಮೇಲಕ್ಕೆ ಬಂದು ತೊಂದರೆ ಕೊಡೋದು ತಪ್ಪೋದಿಲ್ಲ'

ಕಿರಣನನ್ನು ಕರೆದುಕೊಂಡು ಬಂದು ಕಬ್ಬಿಣದ ಬೀರುವಿನ ಮುಂದೆ ನಿಲ್ಲಿಸಿತು ಹೆಂಗಸು.

'ನೋಡು, ಇದು ಲಹರಿಗೆ ಸಂಬಂಧಪಟ್ಟಿದ್ದು. ನಿನಗೇನಾದರೂ ಮಾಹಿತಿ ದೊರಕಬಹುದು' ಹೇಳಿದ ಮಾತಿನಲ್ಲಿ ನೋವಿನ ಛಾಯೆ ಗಾಢವಾಗಿತ್ತು. ಕರುವನ್ನು ಕಳೆದುಕೊಂಡ ತಬ್ಬಲಿ ದನದ ಪರಿಸ್ಥಿತಿ. ಗಂಡನ ಇದಿರು ಏನನ್ನೂ ಧೈರ್ಯವಾಗಿ ಮಾತಾಡದ ಹೆಂಗಸು, ಒಳಗೊಳಗೆ ಕೊರಗುತ್ತಾ, ಬೇಯುತ್ತಾ ಜೀವ ಸವೆಸುತ್ತಿರುವಂತೆ ದಿನ ಕಳೆಯುವುದು ಸ್ಪಷ್ಟವಾಗಿತ್ತು.

ಎಕರೆಗಟ್ಟಲೆ ಜಮೀನಿನ ಒಡೆಯನ ಕೈ ಹಿಡಿಯುವಾಗ ಬಹಳ ಸಂತಸ ದಿಂದಲೇ ಬಲಗಾಲಿಟ್ಟು ಮನೆ ಪ್ರವೇಶಿಸಿರಬೇಕು ಹೆಣ್ಣು. ಜಮೀನುದಾರಿಕೆಯ ನಡುವೆ ದಬ್ಬಾಳಿಕೆಯನ್ನು ಬೆಳೆಸಿಕೊಂಡ ಗಂಡನ ಕೈ ಹಿಡಿದವಳು ಸಂಸಾರ ಸಾಗಿಸುವುದಕ್ಕೆ ಮೀಸಲೆನ್ನುವ ನಿರ್ಲಕ್ಷತನ. ಹೆಣ್ಣು ವಿಪರೀತ ಕನಸುಗಳನ್ನು ಹೊತ್ತುಕೊಂಡು ಬಂದು ನಾಲ್ಕು ಗೋಡೆಗಳ ಮಧ್ಯೆ ಬೆಳೆಯುವಂತಾಗಿದ್ದು ದುರಾದೃಷ್ಟ. ಜೊತೆಗೆ ತಾಯ್ತನದ ಹೊಣೆ. ಕೈಗೊಂದು ಕಾಲಿಗೊಂದು ಆಳುಗಳಿದ್ದರೂ ಮಾನಸಿಕ ತೊಳಲಾಟ.

ಜಮೀನಿನ ಉಸ್ತುವಾರಿಗೆ ಹೊರಟ ಯಜಮಾನ ಮರಳುತ್ತಿದ್ದದ್ದು ನಡು ರಾತ್ರಿಗೆ. ಅದೂ ಹೊರಗೆಲ್ಲೋ ಉಳಿದು ದರ್ಬಾರಿಗೆ ಹಿಂತಿರುಗುವಾಗ ನಸುಕಿನ ವೇಳೆ. ಬದುಕು ಇಷ್ಟು ಅನ್ನುವ ಹೊತ್ತಿಗೆ ಅದಕ್ಕೆ ಹೊಂದಿಕೊಳ್ಳುವ ಅನಿವಾರ್ಯತೆ. ಗಂಡನ ಅನಾಧಾರ; ಮಗುವಿನ ಮಮಕಾರಕ್ಕೆ ನೀಲಕಂಠ ವಿಷ ಕುಡಿದಂತೆ ದುಃಖ ನುಂಗಿಕೊಂಡು ಬದುಕುವುದನ್ನು ಕಲಿತಿತು ಬಂಧಿಯಾದ ಹೆಣ್ಣು. ಕೈಗೆ ಬಂದ ತುತ್ತು ಬಾಯಿಗಿಲ್ಲವೆನ್ನುವಂತೆ ಈಗ ಮಗಳ ಕಣ್ಮರೆ! ಗಂಡನ ಮುಂದೆ ಏನನ್ನೂ ಹೇಳಿಕೊಳ್ಳಲಾರದ ಅಸಹಾಯಕತೆ.

## ಮರಳಿನ ಮನೆ ಕಟ್ಟುವ ತವಕ

ಗೃಹ ಬಂಧನದಿಂದ ಹೊರಗೆ ಹಾರುವ ಹಕ್ಕಿ ಅವಳು ಲಹರಿ! ಹಾರಿಕೊಂಡು ಹಾರಿಕೊಂಡು ಸಾಗಿದ್ದು ದೂರಕ್ಕೆ! ಮರಳು ದಿಣ್ಣೆಯ ಸೆಳೆತಕ್ಕೊಳಗಾದವಳಿಗೆ ಬಾನವೇ ಎಲ್ಲೇ. ಕನಸುಗಳ ಮೂಟೆಯನ್ನು ಕಟ್ಟಿಕೊಂಡು ಮರಳಿನ ಮನೆಯನ್ನು ಕಟ್ಟುವ ತವಕ. ಶಾಶ್ವತವಲ್ಲದ ಮರಳ ಮನೆಗಳಲ್ಲಿ ಕನಸುಗಳು ಉಳಿವುದಾದರು ಹೇಗೆ? ಕನಸುಗಳ ಸೆಳೆತಕ್ಕೆ ಕಾರಣ ತಿಳಿಯದ ಕಾಶಮ್ಮನಿಗೆ ದೂರಾಲೋಚನೆಯೂ ಇರಲಿಲ್ಲ. ಹೇಳಿದ್ದೇ ಸತ್ಯ; ಒಪ್ಪಿದ್ದೇ ಮಿಥ್ಯ. ಕೈಹಿಡಿದು ದಬ್ಬಾಳಿಕೆ ನಡೆಸುವ ಗಂಡನಿಗೂ ವಿವೇಚನೆಯಿಲ್ಲ. ಪರಿಸ್ಥಿತಿ ಕೈ ಮೀರಿ ಸಾಗಿತ್ತು.

ಲಹರಿಯನ್ನು ಕರೆದುಕೊಂಡು ಹೋಗಿದ್ದ ಕಾರು ಬೇಗನೆ ಹಿಂತಿರುಗಿ ಶೆಡ್‌ನಲ್ಲಿ ನಿಂತಿತ್ತು! ಡ್ರೈವರ್‌ನನ್ನು ಕರೆದು ವಿಚಾರಿಸಿದರು.

'ಅವರನ್ನ ಮರಳದಿಣ್ಣೆ ಹತ್ತಿರ ಬಿಟ್ಟು ಹೋಗುವಂತೆ ತಾಕೀತು ಮಾಡಿದ್ರು. ಸಣ್ಣಮ್ಮೋರ ಸಿಟ್ಟು ನಂಗೊತ್ತಿರೋದ್ರಿಂದ ನಾನು ಅವರನ್ನ ಪ್ರಶ್ನಿಸಿಲ್ಲ'



## ಇಲ್ಲಿಯವರೆಗೆ

ಲಹರಿ ಕಣ್ಮರೆಯಾದ ವಿಷಯದ ಬಗ್ಗೆ ಪಿಸಿ ಮತ್ತು ಇನ್ಸ್‌ಪೆಕ್ಟರ್ ಮಧ್ಯೆ ಮಾತುಕತೆ ನಡೆಯುತ್ತದೆ. ಅಷ್ಟೊಂದು ಖಚಿತವಾಗಿ ಹೇಳಲು ಕಾರಣವೇನು ಎಂದು ಇನ್ಸ್‌ಪೆಕ್ಟರ್ ಕೇಳುತ್ತಾನೆ. ಬಂಡೆಯ ಹಿಂದಿನಿಂದ ಹಾದು ಹೋದ ವ್ಯಕ್ತಿ ಹಾಗೂ ಪಾಂಬು ಹೇಳಿದ ವ್ಯಕ್ತಿ ಒಬ್ಬನೇ ಆಗಿರುವುದರಿಂದ ಅನುಮಾನ ಉಂಟಾಯಿತು ಎನ್ನುತ್ತಾನೆ ಪಿ.ಸಿ. ಎಲ್ಲರೂ ಮರಳುದಿಣ್ಣೆಯ ಕಡೆಗೆ ಹೆಜ್ಜೆ ಹಾಕುತ್ತಾರೆ. ಇನ್ಸ್‌ಪೆಕ್ಟರ್ ರಾಜಧಾನಿ ಪಿಸಿಯನ್ನು ಅನುಸರಿಸುತ್ತಾನೆ. ಬಳಿಕ ಎಲ್ಲರೂ ಕಾರಿನಲ್ಲಿ ಹೆದ್ದಾರಿ ಕಡೆಯಿಂದ ಸಂಚರಿಸುತ್ತಾರೆ.

ಹಿತೇಶನ ಬಳಿ ಲಹರಿಯ ಬಗ್ಗೆ ವಿಚಾರಿಸಿಕೊಳ್ಳುತ್ತಾರೆ. ನಿನ್ನನ್ನು ಪೊಲೀಸರಿಗೆ ಹಿಡಿದುಕೊಡೋ ಉದ್ದೇಶವಿಲ್ಲ ಎನ್ನುತ್ತಾ ಬಂಡೆಗೆ ಬರಲು ಹೇಳಿದ್ದೇಕೆ ಎಂದು ಕೇಳುತ್ತಾನೆ ಪೊಲೀಸ್ ಅಧಿಕಾರಿ. ಕಾಕುಟ್ಟ ಬರಲಾರ ಎನ್ನುವ ಉದ್ದೇಶದಿಂದ ಬರಲು ಹೇಳಿದ್ದೆ. ಅದೇ ಸಮಯಕ್ಕೆ ಪೊಲೀಸ್‌ನವರ ಆಗಮನ ಕಾಕತಾಳೀಯವಾಗಿ ಆಯಿತು ಎನ್ನುತ್ತಾನೆ ಹಿತೇಶ. 'ಪೊಲೀಸರನ್ನು ಕಂಡು ನೀನು ನನ್ನನ್ನು ಒಳಗೆ ಬಿಟ್ಟು ಹಿಂಬದಿಯಿಂದ ಓಡಿ ಹೋಗೋದಿಕ್ಕೆ ಕಾರಣವೇನು?' ಎಂದಾಗ ಪಾಂಬುವಿನ ಮುಖ ಕಂತಿತು. ತಪ್ಪಿತಸ್ಥ ಭಾವನೆ ತುಂಬಿತ್ತು.

ಅವಳ ಬಗ್ಗೆ ಮಾಹಿತಿಯಿಲ್ಲ. ಆಘಾತಕರ ವಾರ್ತೆ!

ಲಹರಿ ಎಲ್ಲೂ ಕಾಣಸುತ್ತಿಲ್ಲ. ಕುಸಿದು ಕುಳಿತರು ಕಾಶಮ್ಮ! ರಾಯರ ದರ್ಪ ಇಳಿಯಿತು. ಶ್ರೀಮಂತ ಮನೆತನಕ್ಕೆ ಕಪ್ಪು ಚುಕ್ಕೆ!!

****

ಕೆಲ ಹೊತ್ತು ಕಾಶಮ್ಮನ ಮುಖವನ್ನೇ ದಿಟ್ಟಿಸಿದ ಕಿರಣ. ಅವರ ಉನ್ಮಿಲಿತ ಭಾವನೆಯಿಂದ ಅಪಾಯವಿಲ್ಲವೆನ್ನುವುದನ್ನು ದೃಢಪಡಿಸಿಕೊಂಡ. ಮಗಳ ಕಣ್ಮರೆಯಿಂದ ಆಘಾತಕ್ಕೊಳಗಾದ ಹೆಣ್ಣು ಸಹಾಯ ಹಸ್ತ ಬೇಡುವುದು ಸುಳ್ಳಲ್ಲ. ಆ ಹಸ್ತ ನೀಡಬಲ್ಲ ವ್ಯಕ್ತಿಯ ಮೇಲೆ ಬಹಳಷ್ಟು ಭರವಸೆ. ಸ್ವಂತ ಮಗನಂತೆ ಅವನನ್ನು ಕುಳ್ಳಿರಿಸಿ ಹತ್ತಿರದಲ್ಲಿ ಕುಳಿತು ಯಾಚನೆಯ ದನಿಯಲ್ಲಿ ಕೇಳಿದರು.

'ಕಿರಣ, ನನ್ನ ಮಾತು ನಡೆಸಿಕೊಡ್ತೀಯಲ್ವೋ?'

ನಿರಾಕರಣೆಯ ಪದಗಳನ್ನು ಬಳಸುವಂತಿಲ್ಲ. ಭಾವುಕತೆಯಿಂದ ತೋಯ್ದ ಜೀವ ಪಕ್ಕದಲ್ಲಿಯೇ ಯಾಚಿಸುತ್ತಿದೆ. ಆ ನಿಟ್ಟಿನಲ್ಲಿಯೇ ಬಹಳಷ್ಟು ವಿಷಯಗಳನ್ನು ಸಂಗ್ರಹಿಸಿದ್ದ ಕಿರಣ. ಅದೇ ಮೇನಕಾಳ ಕೆಂಡದಂತಹ ಕೋಪಕ್ಕೆ ಗುರಿಯಾಗಿರುವುದು. ಭುಜಂಗೇಶರಾಯರ ಅವಮಾನವನ್ನು ಸಹಿಸಿಕೊಂಡಿರುವುದು.

'ಖಂಡಿತವಾಗಿಯೂ ನನ್ನ ಕರ್ತವ್ಯ ನಾನು ಮಾಡ್ತೀನಿ ಅನ್ನೋ ಭರವಸೆ ನೀಡಬಲ್ಲೆ. ಅದರಲ್ಲಿ ಅನುಮಾನವೇ ಬೇಡ' ಖಚಿತವಾಗಿ ಹೇಳಿದಾಗ ಅವರ